**ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ : 21-10-2020 ನಿರ್ದೇಶಕರು, ಪಂಚಾಯತ್ ರಾಜ್ ಹಾಗೂ ನಿರ್ದೇಶಕರು, ಪಿ.ಎಂ.ಐ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಜೊತೆ ಯೋಜನಾ ಪ್ರಕ್ರಿಯೆ / ವಿಷಯಸೂಚಿ ತಯಾರಿಕೆ ಸಂಬಂಧ ನಡೆದ ಸಭೆಯ ಸಭಾ ನಡವಳಿಗಳು.**

* * * * *

**ಸಭೆಗೆ ಹಾಜರಾದ ಗಣ್ಯರು :**

1) ಶ್ರೀ ಪ್ರಮೋದ ಹೆಗಡೆ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬಹುಮಹಡಿ ಕಟ್ಟಡ, ಬೆಂಗಳೂರು.
2) ಡಾ. ಏಕಾಂತಪ್ಪ, ನಿರ್ದೇಶಕರು, ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು.
3) ಶ್ರೀ ಪ್ರಾಣೇಶ್ ರಾವ್, ನಿರ್ದೇಶಕರು, ಪಿ.ಎಂ.ಐ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು.
4) ಶ್ರೀ ಎಸ್.ನಂಜುಂಡರಾವ್, ಸಮಾಲೋಚಕರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಶ್ರೀ ಹೆಚ್.ವೇಣುಗೋಪಾಲ್, ಸಮಾಲೋಚಕರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬಹುಮಹಡಿ ಕಟ್ಟಡ, ಬೆಂಗಳೂರು.

ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ರವರು ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ ವಿಷಯಸೂಚಿಯಂತೆ ಸಭೆ ಪ್ರಾರಂಭಿಸಿದರು.

ಅಂಶಾವಾರು ದೀರ್ಘ ಚರ್ಚೆ ನಡೆಸಿ ಸಭೆಯು ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

- ರಾಜ್ಯವಲಯ ಯೋಜನೆಗಳಿಂದ ಬಹಳಷ್ಟು ಕಾರ್ಯಚಟುವಟಿಕೆಗಳು, ಕಾಮಗಾರಿಗಳು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿದ್ದರೂ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಮಾಹಿತಿಯೇ ಲಭ್ಯವಿಲ್ಲದಿರುವುದರಿಂದ, ಯೋಜನೆಗಳ ವಿಕೇಂದ್ರೀಕರಣದ ಜೊತೆಗೆ ಮಾಹಿತಿ ವಿಕೇಂದ್ರೀಕರಣದತ್ತ ಹೆಚ್ಚು ಗಮನ ಹರಿಸಬೇಕು.
- ಜನವಸತಿಗಳಲ್ಲಿ ವಾಸಿಸುತ್ತಿರುವ ಜನರ / ಕುಟುಂಬದ ಮಾಹಿತಿಗಳು ಈಗಾಗಲೇ ಮತದಾನ ಪಟ್ಟಿಯಲ್ಲಿ ಅಳವಡಿಸಿರುವುದರಿಂದ ಪ್ರಸ್ತುತ ಜನವಸತಿಗಳ ಅಧಿಸೂಚನೆ ಬಗ್ಗೆ ಇರುವ ಸಾಧಕ-ಬಾಧಕಗಳನ್ನು ಅಧ್ಯಯಿಸಿ ಅಗತ್ಯ ಕ್ರಮ.
- ವಿವಿಧ ಯೋಜನೆಗಳಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೈಗೊಂಡ ಕಾಮಗಾರಿ / ಸೃಜಿಸಿದ ಆಸ್ತಿಗಳನ್ನು ಅದರ ಸಮರ್ಪಕ ನಿರ್ವಹಣೆಗೆ ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರಿಸಿರುವ ಬಗ್ಗೆ ಅಗತ್ಯ ಕ್ರಮ.
- ಗ್ರಾಮ ಪಂಚಾಯತ್ ಆಸ್ತಿ ವಹಿಯಲ್ಲಿ ಪ್ರತಿ ವರ್ಷವೂ ಹೊಸದಾಗಿ ಸೃಜಿಸಿದ ಆಸ್ತಿ ವಿವರ ಅಳವಡಿಸಿದ ಮಾಹಿತಿಗಳ ಪರಿಶೀಲನೆ.
- ಗ್ರಾಮ ಪಂಚಾಯತಿಗಳಲ್ಲಿ ಪ್ರತಿ 2 ವರ್ಷಕ್ಕೊಮ್ಮೆ ಆಸ್ತಿ ತೆರಿಗೆ ಪರಿಷ್ಕೃತಗೊಳಿಸಬೇಕಾಗಿದ್ದು, ಇವುಗಳ ಅನುಷ್ಠಾನದ ಪರಿಶೀಲನೆ.
- ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನಾ ಸಮಿತಿಗಳು, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳ ರಚನೆ ಹಾಗೂ ಅವುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಒತ್ತು

ನೀಡಿದಲ್ಲಿ ಯೋಜನಾ ಪ್ರಕ್ರಿಯೆಗಳು ಚುರುಕುಗೊಳಿಸಿದಂತಾಗಿ ತಳಮಟ್ಟದಿಂದ ರಾಜ್ಯಮಟ್ಟದ ಯೋಜನೆ ರೂಪಿಸಲು ಅನುವಾಗಲಿದ್ದು ಇದರ ಬಗ್ಗೆ ಅವಶ್ಯ ಕ್ರಮ.

- ನಿರ್ದೇಶಕರು, ಪಂಚಾಯತ್ ರಾಜ್ ರವರು ಸಮಿತಿಯು ಈಗಾಗಲೇ ತಯಾರಿಸಿರುವ ವಿಷಯಸೂಚಿ ಅಂಶಗಳನ್ನು ಅಧ್ಯಯಿಸಿ ಸಲಹೆ / ಅಭಿಪ್ರಾಯ ನೀಡುವುದಾಗಿ ತಿಳಿಸಿದರು.
- ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯಿಂದ ನಿರ್ದೇಶಕರು, ಪಂಚಾಯತ್ ರಾಜ್ ರವರಿಗೆ ಕೆಲವು ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದ್ದು, ಅದರ ಸವಿವರದ ಮಾಹಿತಿಯೊಂದಿಗೆ ಪತ್ರ ಬರೆಯಲು ನಿರ್ದೇಶಕರು, ಪಂಚಾಯತ್ ರಾಜ್ ರವರು ತಿಳಿಸಿದರು.

ಸಭೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಪ್ರಮೋದ ಹೆಗಡೆ)
ಉಪಾಧ್ಯಕ್ಷರು
ಕ.ರಾ.ವಿ.ಯೋ.&ಅ. ಸಮಿತಿ

ಸಂಖ್ಯೆ : 46/ಉಪ/ಕ.ರಾ.ವಿ.ಯೋ.ಅ.ಸ/20-21 ದಿನಾಂಕ :03-11-2020

ಇವರಿಗೆ :

1) ಡಾ. ಏಕಾಂತಪ್ಪ, ನಿರ್ದೇಶಕರು, ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು.
2) ಶ್ರೀ ಪ್ರಾಣೇಶ್ ರಾವ್, ನಿರ್ದೇಶಕರು, ಪಿ.ಎಂ.ಐ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು.
3) ಶ್ರೀ ಎಸ್.ನಂಜುಂಡರಾವ್, ಸಮಾಲೋಚಕರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬಹುಮಹಡಿ ಕಟ್ಟಡ, ಬೆಂಗಳೂರು.
4) ಶ್ರೀ ಹೆಚ್.ವೇಣುಗೋಪಾಲ್, ಸಮಾಲೋಚಕರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬಹುಮಹಡಿ ಕಟ್ಟಡ, ಬೆಂಗಳೂರು.
5) ಶ್ರೀ ಎಮ್.ಎಮ್.ರೇಣುಕಾನಂದ ಸ್ವಾಮಿ, ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬಹುಮಹಡಿ ಕಟ್ಟಡ, ಬೆಂಗಳೂರು.
6) ಕಛೇರಿ ಪ್ರತಿ.

ಪ್ರತಿ ಮಾಹಿತಿಗಾಗಿ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4) ಕಛೇರಿ ಪ್ರತಿ.